



# ಪವಿತ್ರ ಪತ್ರಮಾಲೆ

## ಸ್ವಾಮಿ ತುರೀಯಾನಂದಜಿ ಅವರ ಒಂದು ಪತ್ರ



*ಕನ್‌ಖಲ್*
*ಸೆಪ್ಟೆಂಬರ್ ೧೦, ೧೯೧೪*

ಪ್ರೀತಿಯ,

ನಿನ್ನ ಪತ್ರ ನನಗೆ ನೆನ್ನೆ ತಾನೇ ತಲುಪಿತು.

ನನ್ನ ಹಿಂದಿನ ಪತ್ರದಿಂದ (೨೭, ಜುಲೈ, ೧೯೧೪) ನೀನು ಕರ್ಮಯೋಗದ ಬಗ್ಗೆ ಹಲವಾರು ಹೊಸ ವಿಷಯಗಳನ್ನು ಕಲಿತುಕೊಂಡದ್ದನ್ನು ತಿಳಿದು ಹರ್ಷವಾಯಿತು. ನಿನ್ನ ಕಾರ್ಯಗಳನ್ನು ನೀನು 'ಆಸೆ' ಇಟ್ಟುಕೊಂಡು ಮಾಡುತ್ತೀಯೋ, ಅಥವಾ ಆಸೆಯಿಲ್ಲದೆಯೇ ಮಾಡುತ್ತೀಯೋ ಇದು ಮುಖ್ಯವಲ್ಲ. ಮಹತ್ವದ ಸಂಗತಿ ಇದು: ಯತ್ಕರೋಷಿ ಯದಶ್ನಾಸಿ ಯಜ್ಜುಹೋಸಿ ದದಾಸಿ ಯತ್ । ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್॥ (ಭಗವದ್ಗೀತೆ, ೯ : ೨೭) "ಎಲೈ ಕುಂತೀಪುತ್ರನೇ, ನೀನು ಏನನ್ನು ಮಾಡುವೆಯೋ, ಏನನ್ನು ತಿನ್ನುವೆಯೋ, ಏನನ್ನು ಹೋಮ ಮಾಡುವೆಯೋ, ಏನನ್ನು ನೀಡುವೆಯೋ, ಯಾವ ತಪಸ್ಸನ್ನು ಆಚರಿಸುವೆಯೋ, ಅವೆಲ್ಲವನ್ನೂ ನನಗೆ ಅರ್ಪಣೆ ಮಾಡಿಬಿಡು."

ಈ ಭಾವನೆಯನ್ನು ನಿನ್ನ ಮನಸ್ಸಿನಲ್ಲಿ ಸತತವಾಗಿ ಇಟ್ಟುಕೋ: "ಭಗವಂತ, ನೀನು ನನ್ನ ಒಳಗೂ ಇದ್ದೀಯೆ; ಹೊರಗೂ ನೀನೇ ಇದ್ದೀಯೆ; ನಾನು ನಿನ್ನ ಯಂತ್ರ; ನೀನು ಅದರ ಚಾಲಕ. ನಿನ್ನ ಆದೇಶದ ಪ್ರಕಾರ ನಾನು ನಡೆದುಕೊಳ್ಳುತ್ತೇನೆ." ಇದಕ್ಕಿಂತ ಇನ್ನೇನು ತಾನೇ ಬೇಕು? ಈ ಸ್ಥಿತಿಯನ್ನು ಒಮ್ಮೆಗೇ ತಲುಪಲು ಸಾಧ್ಯವೇ? ಅದಕ್ಕಾಗಿ ಸತತ ಅಭ್ಯಾಸ ಅವಶ್ಯ. ನಿರಂತರ ಅಭ್ಯಾಸದಿಂದ ಯಶಸ್ಸು ಲಭಿಸುತ್ತದೆ. ಆಗ ಭಗವಂತನು ನಿಜವಾಗಿಯೂ ದೇಹವೆಂಬ ನಮ್ಮ ಯಂತ್ರದ ಚಾಲಕನಾಗುತ್ತಾನೆ. ಸತ್ಯಾಂಶವೆಂದರೆ ಇದು: "ಯಾವುದಾದರೂ ಒಂದು ನೆವದಿಂದ ಜಗನ್ಮಾತೆಯು ನಮ್ಮನ್ನು ಭಕ್ತಿಯ ಹಗ್ಗದಿಂದ ಬಂಧಿಸಿಟ್ಟಿರುತ್ತಾಳೆ." ಎಲ್ಲವನ್ನೂ ಮಾಡುತ್ತಿರುವುದು ಆಕೆಯೇ. ಇದನ್ನು ಅರ್ಥಮಾಡಿಕೊಳ್ಳಲು ಅಶಕ್ಯರಾಗಿ ನಾವೇ 'ಮಾಡುವವರೆಂದು' ಆಲೋಚಿಸುತ್ತೇವೆ. ಹಾಗೆಂದೇ ಕರ್ಮಬಂಧನಕ್ಕೆ ಒಳಪಟ್ಟು ಸಂಕಷ್ಟಗಳಿಗೆ ಒಳಗಾಗುತ್ತೇವೆ. ಒಬ್ಬ ವ್ಯಕ್ತಿ ಆಲೂಗಡ್ಡೆ ಮತ್ತಿತರ ತರಕಾರಿಗಳ ಜೊತೆಗೆ ಅನ್ನವನ್ನು ಬೇಯಿಸುತ್ತ ಇದ್ದಾನೆ ಎಂದುಕೊಳ್ಳಿ. ಸ್ವಲ್ಪಕಾಲದ ನಂತರ, ತರಕಾರಿಗಳು ಅಲುಗಾಡಲಾರಂಭಿಸುತ್ತವೆ. ಆಗ ಮಕ್ಕಳು ಯೋಚಿಸುತ್ತಾರೆ, ತರಕಾರಿಗಳು ತಪ್ಪಿಸಿಕೊಳ್ಳಲು ನೆಗೆಯುತ್ತಿವೆ ಎಂಬುದಾಗಿ. ಆದರೆ ಆ ರೀತಿ ಆಗುವುದು ಪಾತ್ರೆಯ ಕೆಳಗಡೆ ಇರುವ ಬೆಂಕಿಯ ಕಾರಣದಿಂದ ಎಂದು ಅವರಿಗೆ ಗೊತ್ತಾಗುವುದೇ ಇಲ್ಲ. ಬೆಂಕಿಯನ್ನು ತೆಗೆದುಬಿಟ್ಟರೆ ಎಲ್ಲವೂ ಸುಮ್ಮನಾಗಿಬಿಡುತ್ತದೆ. ಹಾಗೆಯೇ ಭಗವಂತನೇ ಈ ಎಲ್ಲವೂ ಆಗಿದ್ದಾನೆ. ಅವನೇ ನಮ್ಮೊಳಗೆ ಚೈತನ್ಯಶಕ್ತಿಯಾಗಿ ನೆಲೆಸಿದ್ದಾನೆ. ಕ್ರಿಯಾಶಕ್ತಿಯಾಗಿ ಎಲ್ಲ ಕೆಲಸಗಳನ್ನೂ ಅವನೇ ಮಾಡಿಸುತ್ತಿದ್ದಾನೆ. ಇದನ್ನು ಅರ್ಥಮಾಡಿಕೊಳ್ಳದೆಯೇ, ನಾವೇ ಕರ್ತೃಗಳು (ಮಾಡುವವರು) ಎಂದು ನಾವು ಎಣಿಸಿದ್ದೇವೆ.

ಈ ಜಗತ್ತಿನಲ್ಲಿ ಭಗವಂತನಲ್ಲದೆ ಬೇರೆ ಯಾರಾದರೂ ಇದ್ದಾರೆಯೇ? ಅವನೇ ಬಗೆಬಗೆಯ ರೂಪಗಳಲ್ಲಿ ಪ್ರಕಟಗೊಂಡಿದ್ದಾನೆ. ಆದರೆ ಅಜ್ಞಾನದ ವಶಕ್ಕೊಳಗಾಗಿ, ಅವನ ಸ್ಥಾನದಲ್ಲಿ, ಹಲವಾರು ವಿವಿಧ ವಸ್ತುಗಳನ್ನು ನಾವು ಕಾಣುತ್ತೇವೆ. ನಾವು ಅವನನ್ನು ಕಾಣಲು ಸಾಧ್ಯವಾದರೆ, ವೈವಿಧ್ಯತೆಗಳನ್ನು ಇನ್ನುಮುಂದೆ ಕಾಣಲಾರೆವು. ಆಗ ನಮಗೆ ಯಾವುದೇ ದುಃಖವೂ ತಟ್ಟುವುದಿಲ್ಲ. ಭಗವಂತನು ಎಲ್ಲರಲ್ಲೂ ಇರುವನು. ಅವನೇ ಎಲ್ಲವೂ ಆಗಿರುವನು. ಈ ಜ್ಞಾನದಲ್ಲಿ ನೆಲೆನಿಂತವನು ಮುಕ್ತನಾಗುವನು.

ಮಹಾಭಾರತದಲ್ಲಿ ವ್ಯಾಧಗೀತೆ ಬರುತ್ತದೆ. ಒಬ್ಬ ಮಾಂಸ ಮಾರುವವನು ತನ್ನ ಹಿಂದಿನ ಜನ್ಮದಲ್ಲಿಯೇ ಜ್ಞಾನವನ್ನು ಪಡೆದುಕೊಂಡಿದ್ದನು. ಆದರೆ ಪ್ರಾರಬ್ಧಕರ್ಮವಶದಿಂದ ಅವನು ಒಬ್ಬ ಮಾಂಸ ಮಾರುವವನ ಜಾತಿಯಲ್ಲಿ ಜನ್ಮವೆತ್ತಿದನು. ಆದರೆ ಅವನು ತನ್ನ ಜಾತಿಗೆ ಅನುಗುಣವಾದ ವೃತ್ತಿಯನ್ನು ನಿಷ್ಠೆಯಿಂದ ಆಚರಿಸುತ್ತಿದ್ದನು. ಆದರೆ ಸ್ವತಃ ತಾನು ಯಾವುದೇ ಪ್ರಾಣಿಯನ್ನು ಕೊಲ್ಲುತ್ತಿರಲಿಲ್ಲ. ಅವನು ಬೇರೆಯವರಿಂದ ಮಾಂಸವನ್ನು ಕೊಂಡುಕೊಳ್ಳುತ್ತಿದ್ದನು. ಅದನ್ನು ಮಾರುಕಟ್ಟೆಯಲ್ಲಿ ಮಾರುತ್ತಿದ್ದನು. ಈ ವೃತ್ತಾಂತವನ್ನು ನಾವು ಮಹಾಭಾರತದಲ್ಲಿ ನೋಡುತ್ತೇವೆ.

ನೀನು ಭಗವದ್ಗೀತೆಯ ಒಂದು ಶ್ಲೋಕದ ಉಲ್ಲೇಖ ಮಾಡಿದ್ದೀಯೆ:

ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।
ಹತ್ವಾಪಿ ಸ ಇಮಾಂಲ್ಲೋಕಾನ್ನ ಹಂತಿ ನ ನಿಬಧ್ಯತೇ ॥

"ಯಾರಲ್ಲಿ 'ನಾನು' ಎಂಬ ಭಾವ ಇಲ್ಲವೋ, ಯಾರ ಬುದ್ಧಿಯು (ವಿಷಯವಸ್ತುಗಳಿಗೆ) ಅಂಟಿಕೊಂಡಿಲ್ಲವೋ, ಅವನು ಈ ಜೀವರನ್ನು ಕೊಂದರೂ, ನಿಜಾರ್ಥದಲ್ಲಿ ಕೊಲ್ಲುವುದೇ ಇಲ್ಲ" (ಭಗವದ್ಗೀತಾ: ೧೮: ೧೭). ಇದರ ಬಗ್ಗೆ ಸ್ವಲ್ಪ ನೀನು ಯೋಚಿಸಿದರೆ ನಿನಗೆ ಅರ್ಥವಾಗುತ್ತದೆ: ಯಾವ ಮನುಷ್ಯನಲ್ಲಿ ಅಹಂಕಾರ ಭಾವನೆ ಇಲ್ಲವೋ, ಅಥವಾ 'ನಾನು ಕರ್ತಾ' ಎಂದು ಯಾರು ಯೋಚಿಸುವುದಿಲ್ಲವೋ, ಅವನಿಗೆ ಯಾವ ರೀತಿಯ ಬಂಧನವೂ ಅಂಟುವುದಿಲ್ಲ. 'ನಾನು' ಎಂಬ ಭಾವನೆಯೇ ಬಂಧನಕ್ಕೆ ಕಾರಣ. ನಾನು ಮುಕ್ತನಾಗುವುದು ಯಾವಾಗ? 'ನಾನು' ಎನ್ನುವುದು ಸಂಪೂರ್ಣವಾಗಿ ನಶಿಸಿಹೋದಾಗ. 'ನಾನು' ಎನ್ನುವುದು ಇಲ್ಲದಿದ್ದರೆ, ಅಲ್ಲಿ ಬಂಧನವಾದರೂ ಹೇಗೆ ಇರುತ್ತದೆ? "ನಾನಲ್ಲ, ನಾನಲ್ಲ. ನೀನೇ ನೀನೇ." ಯಾರಲ್ಲಿ ಅಹಂಕಾರ ಭಾವನೆಯಿಲ್ಲವೋ ಅವನು ಎಲ್ಲೆಲ್ಲೂ ಕೇವಲ ದೇವರನ್ನು ಮಾತ್ರ ನೋಡುತ್ತಾನೆ. ಇದರಿಂದಾಗಿ ಅವನು ಯಾವತ್ತೂ ಬಂಧನಕ್ಕೆ ಒಳಗಾಗುವುದೇ ಇಲ್ಲ.

ನಿನ್ನವ
ತುರೀಯಾನಂದ

## ಭಗವದ್ಗೀತಾ ತತ್ತ್ವಸೌರಭ



# ಜ್ಞಾನದ ಮಹಿಮೆ

**ಸಾ**ಮಾನ್ಯವಾಗಿ ನಾವು ಯಾವುದೇ ವಿಷಯವನ್ನು ಪರಿಗಣಿಸುವಾಗ ಅದರ ಜ್ಞಾನ ಮತ್ತು ಪ್ರಯೋಜನ – ಇವೆರಡರ ಕಡೆಗೂ ಗಮನ ಕೊಡುತ್ತೇವೆ. ಅದು ಏನು ಎಂಬುದನ್ನೂ ಅದರ ಗುಣಾವಗುಣಗಳನ್ನೂ ನಾವು ಪರಿಶೀಲಿಸುವುದರ ಜೊತೆಗೆ ಅದರಿಂದ ನನಗಾಗಲಿ ಇತರರಿಗಾಗಲಿ ಏನು ಪ್ರಯೋಜನ ಮತ್ತು ಅದು ಎಷ್ಟು ಹಾನಿಕರ ಎಂಬುದನ್ನೂ ಗಣನೆಗೆ ತೆಗೆದುಕೊಳ್ಳುತ್ತೇವೆ. ಮೊದಲನೆಯ ಅಂಶವು ಎರಡನೆಯ ಅಂಶಕ್ಕೆ ಎಡೆಮಾಡಿಕೊಡುತ್ತದೆ. ಆದರೆ ಅನೇಕ ಸಂದರ್ಭಗಳಲ್ಲಿ ವಸ್ತುವಿನ ಜ್ಞಾನವಿಲ್ಲದೆಯೇ ಅದರ ಪ್ರಯೋಜನವನ್ನು ನಾವು ಪಡೆಯುತ್ತಿರಬಹುದು. ಸಂಗೀತಜ್ಞಾನವಿಲ್ಲದೆಯೇ ಅದರ ಪ್ರಯೋಜನವನ್ನು ನಾವು ಪಡೆಯುತ್ತಿರಬಹುದು. ಸಂಗೀತಜ್ಞಾನವಿಲ್ಲದೆಯೇ ಅದರಿಂದ ವ್ಯಕ್ತಿತ್ವದ ಮೇಲೆ ಉಂಟಾಗುವ ಸತ್ಪರಿಣಾಮವನ್ನು ಪಡೆಯುತ್ತಿರಬಹುದು. ಆಹಾರಪದಾರ್ಥಗಳ ಜ್ಞಾನವಿಲ್ಲದೆಯೇ ಅವುಗಳ ಪ್ರಯೋಜನವನ್ನು ಪಡೆಯಬಹುದು. ಆದರೆ ಇಲ್ಲಿಯೂ ಜ್ಞಾನ ಕೆಲಸ ಮಾಡುತ್ತದೆ. ಪಂಚೇಂದ್ರಿಯಗಳಿಂದ ಉಂಟಾಗುವ ಪ್ರತ್ಯಕ್ಷಜ್ಞಾನವಿಲ್ಲದೆ ನಾವು ಯಾವ ವಸ್ತುವನ್ನೂ ಯಾವ ರೀತಿಯಲ್ಲಿಯೂ ಬಳಸಲಾಗುವುದಿಲ್ಲ. ಮೂಲಭೂತವಾದ ಅರಿವಿಲ್ಲದೆ ಏನೂ ನಡೆಯುವುದಿಲ್ಲ. ಆದ್ದರಿಂದ ಜ್ಞಾನಕ್ಕೂ ಮತ್ತು ಮೌಲ್ಯಕ್ಕೂ ನಿಕಟ ಸಂಬಂಧವಿದೆ ಎಂದು ಹೇಳಬಹುದು. ಜ್ಞಾನವು ಅಧಿಕವಾದಷ್ಟೂ ಮೌಲ್ಯವೂ ಅಧಿಕವಾಗುತ್ತಾ ಹೋಗುತ್ತದೆ. ವೈಜ್ಞಾನಿಕ ಜ್ಞಾನವು ಬೆಳೆದಂತೆಲ್ಲ ಪ್ರಾಕೃತಿಕ ವಸ್ತುಗಳ ಮತ್ತು ಶಕ್ತಿಗಳ ಸದ್ಬಳಕೆ ಮತ್ತು ದುರ್ಬಳಕೆ ಅಧಿಕವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗೆ ಜ್ಞಾನವಿಲ್ಲದೆ ಜೀವನವಿಲ್ಲ ಎಂದು ಹೇಳಬಹುದು.

ಹಾಗಾದರೆ ಜ್ಞಾನವೆಂದರೇನು? ಜ್ಞಾನದಲ್ಲಿ ಎರಡು ಪ್ರಭೇದಗಳಿವೆ: **ವಿಷಯಜ್ಞಾನ** ಮತ್ತು **ವಿಷಯಿಜ್ಞಾನ.** ಹೊರಗಿನ ವಿಷಯ ವಸ್ತುಗಳನ್ನೂ, ವೈವಿಧ್ಯಮಯ ಮನಸ್ಸನ್ನೂ ಅರಿಯುವುದು ವಿಷಯಜ್ಞಾನ. ಅರಿಯುವವನನ್ನೇ ತಿಳಿಯುವುದು ವಿಷಯಿಜ್ಞಾನ. ಉಪನಿಷತ್ತುಗಳ ಪ್ರಕಾರ ಮೊದಲನೆಯದು ಅಪರಾವಿದ್ಯೆ, ಮತ್ತು ಎರಡನೆಯದು ಪರಾವಿದ್ಯೆ. ಆತ್ಮನು ಎಲ್ಲವನ್ನೂ ಅರಿಯುವ ವಿಷಯಿ. ಎಲ್ಲ ವಿಷಯಾನುಭವಕ್ಕೂ ವಿಷಯಿಯಾದ ಆತ್ಮನನ್ನು ವಿಷಯದಂತೆ ಅರಿಯಲಾಗುವುದಿಲ್ಲ ಎಂದು ಉಪನಿಷತ್ತುಗಳು ಸಾರುತ್ತವೆ. ಹಾಗಾದರೆ ವಿಷಯಿಜ್ಞಾನ ಹೇಗೆ ಸಾಧ್ಯ? ಆತ್ಮನನ್ನು ಅರಿಯಲಾಗುವುದಿಲ್ಲ ಎಂಬುದೂ ಒಂದು ಜ್ಞಾನವೇ. ತಾನು ನಿಜವಾಗಿಯೂ ಆತ್ಮ ಎಂದು ಅನುಭವಾತ್ಮಕ ಜ್ಞಾನವನ್ನು ಪಡೆಯುವುದೇ ವಿಷಯಿಜ್ಞಾನ. ಈ ಜ್ಞಾನದಲ್ಲಿ ಕೇವಲ ಇರುವಿಕೆ ಮಾತ್ರವಿರುತ್ತದೆ; ಯಾವ ಕ್ರಿಯೆಯೂ ಇರುವುದಿಲ್ಲ. ಸರ್ವಕ್ರಿಯಾವಸಾನ ಸ್ಥಿತಿಯೇ ಆತ್ಮಜ್ಞಾನ. ಆದುದರಿಂದಲೇ ಶ್ರೀಕೃಷ್ಣನು ಹೇಳುತ್ತಾನೆ: **ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ** – "ಎಲ್ಲ ಬಗೆಯ ಕರ್ಮಗಳೂ ಜ್ಞಾನದಲ್ಲಿ ಪರ್ಯವಸಾನಗೊಳ್ಳುತ್ತದೆ." ಇದು ಹೇಗೆಂದರೆ ಎಲ್ಲ ನದಿಗಳೂ ಕೊನೆಯಲ್ಲಿ ಸಮುದ್ರವನ್ನು ಸೇರುವಂತೆ.

ಆತ್ಮಜ್ಞಾನವೊಂದನ್ನು ಬಿಟ್ಟರೆ ಎಲ್ಲವೂ ಕ್ರಿಯಾತ್ಮಕವಾದದ್ದು, ವಿಷಯಜ್ಞಾನವೂ ಕ್ರಿಯಾತ್ಮಕವಾದದ್ದು. ಒಂದು ವಿಷಯವನ್ನು ಅರಿಯುವುದೆಂದರೆ ಅದೊಂದು ಪ್ರಕ್ರಿಯೆ. ಒಂದು ವಿಷಯಕ್ಕೆ ಸಂಬಂಧಿಸಿದ ಅನೇಕ ಬಗೆಯ ಸಂವೇದನೆಗಳು ಮಿದುಳಿಗೆ ಹೋಗುತ್ತವೆ. ಹಳೆಯ ನೆನಪಿನ ಅಂಶಗಳು ಅದರೊಂದಿಗೆ ಸೇರಿಕೊಳ್ಳುತ್ತವೆ. ಇವೆಲ್ಲ ಒಟ್ಟು ಸೇರಿ ಆ ವಿಷಯದ ಜ್ಞಾನ ನಮಗುಂಟಾಗುತ್ತದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, ಜ್ಞಾನವು ಒಂದು ಮಿಶ್ರಣ, ಮತ್ತು ಹಲವಾರು ಅಂಶಗಳ ಮಿಶ್ರಣಕ್ರಿಯೆಯೇ ಜ್ಞಾನ. ಅರಿಯುವ ಕ್ರಿಯೆಯೂ ಸೇರಿದಂತೆ ಎಲ್ಲ ಕ್ರಿಯೆಗಳೂ ನಿಂತಾಗ ಮಾತ್ರ ಆತ್ಮಜ್ಞಾನವುಂಟಾಗುತ್ತದೆ. ಆದ್ದರಿಂದ ಎಲ್ಲ ಕ್ರಿಯೆಗಳೂ ಆತ್ಮಜ್ಞಾನದಲ್ಲಿಯೇ ಪರ್ಯವಸಾನಗೊಳ್ಳುತ್ತವೆ. ಸಾಮಾನ್ಯದೃಷ್ಟಿಯಿಂದ ನೋಡಿದರೆ ಜ್ಞಾನವು ಕ್ರಿಯೆಗೆ ಎಡೆ ಮಾಡಿಕೊಡುತ್ತದೆ. ಮೊದಲು ನಾವು ಒಂದು ವಿಷಯವನ್ನು ಅರಿಯುತ್ತೇವೆ. ಅನಂತರ ಆ ವಿಷಯದ ಬಗ್ಗೆ ರಾಗ, ದ್ವೇಷ ಅಥವಾ ಭಯ ಉಂಟಾಗುತ್ತದೆ. ಮುಂದೆ ಆಯಾಯ ಭಾವಕ್ಕೆ ಅನುಗುಣವಾಗಿ ಕ್ರಿಯೆ ಪ್ರಾರಂಭವಾಗುತ್ತದೆ. ಜ್ಞಾನವೂ ಒಂದು ಕ್ರಿಯೆ, ಹಾಗೂ ಒಂದು ಕ್ರಿಯೆಯಿಂದ ಮತ್ತೊಂದು

ಕ್ರಿಯೆ ಉಂಟಾಗುತ್ತದೆ. ಈ ವಿಷಯಪ್ರಪಂಚದಲ್ಲಿ ಎಲ್ಲವೂ ಕ್ರಿಯಾತ್ಮಕವಾದುದು. ಕೊನೆಯಲ್ಲಿ ಈ ಕರ್ಮಗಳಿಂದ ಬೇಸತ್ತು ನೈಷ್ಕರ್ಮ ಸ್ಥಿತಿಯನ್ನು ಪಡೆಯುವ ಹಂಬಲ ಉಂಟಾಗುತ್ತದೆ. ಇದು ಆತ್ಮಜ್ಞಾನದಲ್ಲಿ ಪರ್ಯವಸಾನಗೊಳ್ಳುತ್ತದೆ.

ಇನ್ನೊಂದು ದೃಷ್ಟಿಯಿಂದ ನೋಡಿದರೆ, ಕರ್ಮದ ಮೂಲವನ್ನು ಅರಸುತ್ತ ಹೋದರೆ ಅದು ಆತ್ಮಜ್ಞಾನದಲ್ಲಿಯೇ ಪರ್ಯವಸಾನಗೊಳ್ಳುತ್ತದೆ. ಇಂದ್ರಿಯಗಳಿಂದ ಎಲ್ಲ ಬಗೆಯ ಕರ್ಮಗಳೂ ನಡೆಯುತ್ತವೆ. ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಗಳೆರಡೂ ಸದಾ ಕ್ರಿಯಾಶೀಲವಾಗಿರುತ್ತವೆ. ಈ ಇಂದ್ರಿಯಗಳು ಕೆಲಸ ಮಾಡಬೇಕಾದರೆ ಮನಸ್ಸು ಅದರ ಹಿಂದೆ ಇರಬೇಕು. ಅಂತಃಕರಣವೃತ್ತಿಗಳ ಪ್ರೇರಣೆಯಿಂದಲೇ ಇಂದ್ರಿಯಗಳು ಕೆಲಸ ಮಾಡುತ್ತವೆ. ಮನಸ್ಸೂ ಒಂದು ಉಪಕರಣವೇ. ಈ ಮನಸ್ಸನ್ನು ಕೆಲಸದಲ್ಲಿ ತೊಡಗಿಸುವುದು ಯಾವುದು? ಯಾರಿಗೋಸ್ಕರ ಈ ಎಲ್ಲ ಕೆಲಸಗಳು ನಡೆಯುತ್ತಿವೆ? ಈ ಎಲ್ಲ ಕೆಲಸಗಳನ್ನು ಮಾಡಿಸುವ ಮತ್ತು ಅವುಗಳ ಫಲವನ್ನು ಭೋಗಿಸುವ ಯಜಮಾನ ಯಾರು? ಅವನೇ ಬುದ್ಧಿ ಮನಸ್ಸುಗಳೊಡನೆ ತಾದಾತ್ಮ್ಯ ಹೊಂದಿರುವ ಜೀವಾತ್ಮ – ವ್ಯಕ್ತೀಕರಣಗೊಂಡ ವಿಶ್ವಾತ್ಮ. ಈ ಜೀವಾತ್ಮವನ್ನೂ ಮೀರಿದ ಆತ್ಮನ ಅಸ್ತಿತ್ವವೊಂದಿದೆ. ಏಕೆಂದರೆ ಚೈತನ್ಯಸ್ವರೂಪನಾದ ಆತ್ಮನು ಸರ್ವವ್ಯಾಪಿಯಾಗಿರಬೇಕು, ಎಲ್ಲ ವೈಯಕ್ತಿತೆಯನ್ನು ಹಾಗೂ ದೇಶಕಾಲಗಳನ್ನು ಮೀರಿರಬೇಕು. ಹಾಗಿಲ್ಲದಿದ್ದರೆ ಚೈತನ್ಯವೂ ಒಂದು ಭೌತವಸ್ತುವಿನಂತೆಯೇ ಆಗಿಬಿಡುತ್ತದೆ, ತನ್ನ ಚೈತನ್ಯತ್ವವನ್ನು ಕಳೆದುಕೊಂಡುಬಿಡುತ್ತದೆ. ಆದ್ದರಿಂದ ಈ ವೈಯಕ್ತಿಕತೆಯ ಹಿಂದೆ, ಕರ್ತೃತ್ವ ಭೋಕ್ತೃತ್ವಗಳ ಹಿಂದೆ, ಈ 'ನಾನು', 'ನಾನು' ಎಂಬ ಸ್ಫುರಣೆಯ ಹಿಂದೆ – ಮೋಡದ ಹಿಂದೆ ಸೂರ್ಯನಿರುವಂತೆ – ಪರಮಾತ್ಮತತ್ತ್ವವೊಂದಿರಬೇಕು. ಹೀಗೆ ಕರ್ಮದ ಮೂಲವನ್ನು ಅರಸುತ್ತ ಹೋದರೆ ಆತ್ಮಜ್ಞಾನದಲ್ಲಿ ಅದು ಪರ್ಯವಸಾನಗೊಳ್ಳುತ್ತದೆ.

ಈ ಆತ್ಮಜ್ಞಾನವನ್ನು ಪಡೆಯುವ ಪ್ರಯತ್ನ ಅಥವಾ ಸಾಧನೆಯನ್ನು ಶ್ರೀಕೃಷ್ಣನು 'ಜ್ಞಾನಯಜ್ಞ' ಎಂದು ಕರೆಯುತ್ತಾನೆ. ಇದು ದ್ರವ್ಯಗಳಿಂದ ಕೂಡಿದ (ದ್ರವ್ಯಮಯ) ಬಾಹ್ಯಯಜ್ಞಗಳಿಗಿಂತ ಶ್ರೇಷ್ಠವಾದುದೆಂದು ಹೇಳುತ್ತಾನೆ (೪.೩೩). ಅಗ್ನಿಹೋತ್ರಾದಿ ವೈದಿಕ ಕರ್ಮಗಳು, ಇಂದ್ರಿಯನಿಗ್ರಹ, ಉಪವಾಸಾದಿ ತಪಸ್ಸುಗಳು, ಪ್ರಾಣಾಯಾಮಾದಿ ಸಾಧನೆಗಳು – ಇವೆಲ್ಲವನ್ನೂ ದ್ರವ್ಯಮಯ ಯಜ್ಞವೆಂದು ಪರಿಗಣಿಸಲಾಗಿದೆ. ಇವೆಲ್ಲವೂ ಕರ್ಮಮಯವಾದುವು. ಇವುಗಳೆಲ್ಲವನ್ನೂ ಸರಿಯಾದ ರೀತಿಯಲ್ಲಿ ಅನುಸರಿಸಿದರೆ ಇವು ಕೊನೆಯಲ್ಲಿ ಆತ್ಮಜ್ಞಾನದಲ್ಲಿ ಪರ್ಯವಸಾನಗೊಳ್ಳುತ್ತವೆ ಎಂದು ಶ್ರೀಕೃಷ್ಣನು ಹೇಳುತ್ತಾನೆ (೪.೩೩).

ವಿವಿಧ ದೇವತೆಗಳನ್ನು ಉದ್ದೇಶಿಸಿ ಮಾಡುವ ಯಜ್ಞ, ಪೂಜೆ ಮುಂತಾದವುಗಳಿಗೆ ಅನೇಕ ಬಗೆಯ ವಸ್ತುಗಳು ಬೇಕಾಗುತ್ತವೆ ಮತ್ತು ಅವು ಅನೇಕ ಕ್ರಿಯೆಗಳಿಂದ ಕೂಡಿರುತ್ತವೆ. ಈ ವಸ್ತುಗಳನ್ನು ಸಂಗ್ರಹಿಸುವುದು, ಅವುಗಳನ್ನು ಸರಿಯಾದ ರೀತಿಯಲ್ಲಿ ವಿಧಿವತ್ತಾಗಿ ಅಳವಡಿಸುವುದು, ಅನೇಕ ಬಗೆಯ ಮುದ್ರೆ, ಕ್ರಿಯಾವಿಧಿಗಳು – ಇವುಗಳಲ್ಲಿಯೇ ಹೆಚ್ಚು ಮನಸ್ಸನ್ನು ತೊಡಗಿಸಬೇಕಾಗುತ್ತದೆ. ಹೀಗಾದಲ್ಲಿ ಅಧ್ಯಾತ್ಮ ಚಿಂತನೆಗೆ ಅವಕಾಶವೇ ಇರುವುದಿಲ್ಲ. ಇದು **ದ್ರವ್ಯಮಯ ಯಜ್ಞ**. ಆದರೆ ಭಗವಂತನನ್ನು ಪೂಜಿಸುವುದಕ್ಕೆ ಕೇವಲ ಪತ್ರ, ಪುಷ್ಪ, ಫಲ, ನೀರು – ಇಂತಹ ಸಾಮಾನ್ಯ ವಸ್ತುಗಳಿದ್ದರೆ ಸಾಕು (೯.೨೬). ಅವುಗಳ ಹಿಂದೆ ಭಕ್ತಿ ಇದ್ದರೆ ಯಥೇಷ್ಟ. ಇದು **ಭಾವಮಯ ಯಜ್ಞ**. ದ್ರವ್ಯಮಯ ಯಜ್ಞವು ಕ್ರಮೇಣ ಭಾವಮಯ ಯಜ್ಞವಾಗಿ ಪರಿವರ್ತಿತವಾಗಬೇಕು. ಕೊನೆಯಲ್ಲಿ ಭಾವಮಯ ಯಜ್ಞವು ಜ್ಞಾನದಲ್ಲಿ ಪರಿವರ್ತಿತವಾಗಬೇಕು. ಸರಿಯಾದ ರೀತಿಯಲ್ಲಿ ಭಾವಮಯ ಯಜ್ಞವನ್ನು ಕೈಗೊಂಡರೆ, ಅದು ಜ್ಞಾನದಲ್ಲಿ ಪರ್ಯವಸಾನಗೊಳ್ಳುತ್ತದೆ. ಯಜ್ಞ, ಪೂಜೆ, ಮುಂತಾದ ಧಾರ್ಮಿಕ ಕಲಾಪಗಳೆಲ್ಲದರ ಮುಖ್ಯ ಉದ್ದೇಶ ಭಗವದ್ಭಕ್ತಿಯನ್ನು ಪಡೆಯುವುದೇ ಆಗಿದೆ. ಈ ಉದ್ದೇಶ ಸಫಲವಾಗದಿದ್ದರೆ ಅವೆಲ್ಲವೂ ಕೇವಲ ಶ್ರಮ ಅಷ್ಟೇ.

**ಧರ್ಮಃ ಸ್ವನುಷ್ಠಿತಃ ಪುಂಸಾಂ ವಿಷ್ವಕ್ಸೇನಕಥಾಸು ಯಃ ।**
**ನೋತ್ಪಾದಯೇತ್ ಯದಿ ರತಿಂ ಶ್ರಮ ಏವ ಹಿ ಕೇವಲಮ್ ॥**

"ಮನುಷ್ಯರು ಆಚರಿಸುವ ಧರ್ಮಾಚರಣೆಗಳು, ಭಗವಂತನ ಲೀಲಾಕಥನದಲ್ಲಿ ಆಸಕ್ತಿಯನ್ನು ಕೆರಳಿಸದಿದ್ದರೆ, ಅವು ಕೇವಲ ಶ್ರಮ ಮಾತ್ರ, ವ್ಯರ್ಥವಾದುವು."

ಈಗಿನ ಸಂದರ್ಭದಲ್ಲಿ ನಾವು ನಮ್ಮನ್ನು ತೊಡಗಿಸಿಕೊಳ್ಳುವ ಎಲ್ಲ ಬಗೆಯ ಲೌಕಿಕಕರ್ಮಗಳನ್ನೂ ದ್ರವ್ಯಮಯ ಯಜ್ಞವೆಂದು ಪರಿಗಣಿಸಬಹುದು. ಇವುಗಳೆಲ್ಲವನ್ನು ಸೇವಾದೃಷ್ಟಿಯಿಂದಲೂ ಭಗವದಾರಾಧನಾ ದೃಷ್ಟಿಯಿಂದಲೂ ಮಾಡಿದರೆ ಆತ್ಮಜ್ಞಾನ ಪ್ರಾಪ್ತಿಗೆ ಯೋಗ್ಯವಾದ ಮನಸ್ಥಿತಿಯನ್ನು ಪಡೆಯಬಹುದು. ಜ್ಞಾನಪ್ರಾಪ್ತಿಯ ದೃಷ್ಟಿಯಿಂದ ಮಾಡಿದರೆ ಇವೆಲ್ಲವೂ ಆಧ್ಯಾತ್ಮಿಕ ಸಾಧನೆಯೇ ಆಗುತ್ತವೆ. ಇಲ್ಲದಿದ್ದರೆ ಇವೆಲ್ಲವೂ ಕೇವಲ ಲೌಕಿಕವಾಗಿಯೇ ಉಳಿಯುತ್ತವೆ. ಆಗ ಅಧ್ಯಾತ್ಮ ಮತ್ತು ಲೌಕಿಕಗಳ ವೈರುಧ್ಯದಿಂದಾಗಿ ಸಾಧಕರು ದ್ವಂದ್ವಕ್ಕೊಳಗಾಗುತ್ತಾರೆ; ಲೌಕಿಕವನ್ನೂ ಬಿಡಲಾಗದೆ, ಅಧ್ಯಾತ್ಮವನ್ನೂ ಗಟ್ಟಿಯಾಗಿ ಹಿಡಿದುಕೊಳ್ಳಲಾಗದೆ ತುಂಬ ಕಷ್ಟಪಡುತ್ತಾರೆ. ಆದ್ದರಿಂದಲೇ ಶ್ರೀಕೃಷ್ಣನು ಭಗವದ್ಗೀತೆಯ ಒಂಬತ್ತನೆಯ ಅಧ್ಯಾಯದಲ್ಲಿ ಹೀಗೆ ಹೇಳುತ್ತಾನೆ:

**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।**
**ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥ (೯.೨೭)**

"ಎಲೈ ಅರ್ಜುನ, ಯಾವುದನ್ನು ಮಾಡುತ್ತೀಯೋ, ಯಾವುದನ್ನು ಉಣ್ಣುತ್ತೀಯೋ, ಯಾವುದನ್ನು ಹೋಮ ಮಾಡುತ್ತೀಯೋ, ಯಾವುದನ್ನು ದಾನ ಮಾಡುತ್ತೀಯೋ, ಯಾವ ತಪಸ್ಸನ್ನು ಆಚರಿಸುತ್ತೀಯೋ ಅವೆಲ್ಲವನ್ನೂ ನನಗೇ ಸಮರ್ಪಿಸು."

**ಕರ್ಮದಲ್ಲಿ ಮೂರು ಹಂತಗಳಿವೆ:** ತನಗಾಗಿ ಮಾಡುವುದು, ಇತರಿಗಾಗಿ ಮತ್ತು ಸಮಾಜಕ್ಕಾಗಿ ಮಾಡುವುದು ಹಾಗೂ ಭಗವಂತನಿಗಾಗಿ ಮಾಡುವುದು. ಇಲ್ಲಿ ಕರ್ಮ ಬದಲಾಗುವುದಿಲ್ಲ. ಅದರ ಹಿಂದಿನ ಭಾವ ಬದಲಾಗುತ್ತದೆ, ಅಷ್ಟೇ. ಒಂದು ಚಿಕ್ಕ ಮಗುವು ಸಂಪೂರ್ಣ ತನಗಾಗಿ ಜೀವಿಸುತ್ತದೆ. ಮುಂದೆ